ದಿನಾಂಕಃ-05.07.2023

<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ-</u> ಶ್ರೀ ಕೆ.ಎಸ್.ಎ ವಕೀಲರಿಂದ ವಾದಿಯರ ಪರವಾಗಿ

14. ನ್ಯಾಯಾಲಯದ ಮುಂದೆ ಹಾಜರಿರುವ ವ್ಯಕ್ತಿಯನ್ನು ತೋರಿಸಿ ಆತ ಆನಂದ @ ಆರ್ಮುಗಮ್ ಎಂದರೆ ಆತ ಆನಂದ. ಸದರಿ ವ್ಯಕ್ತಿಯ ಹೆಸರೇನು ಎಂದು ಕೇಳಿದಾಗ ತನ್ನ ಹೆಸರು ಆನಂದ್ ಎಂದು ಮತ್ತು ಮನೆಯಲ್ಲಿ ಆರ್ಮುಗಮ್ ಎಂದು ಕರೆಯುತ್ತಾರೆ ಎಂದು ನುಡಿದಿರುತ್ತಾರೆ.

15. ನನ್ನ ವಿವಾಹವು 2004 ನೇ ಇಸವಿಯಲ್ಲಿ ಪೆರಡೂರಿನಲ್ಲಿ ನೆರವೇರಿತು ಎಂದರೆ ನಿಜ, ಸಾಕ್ಷಿದಾರರು ಮುಂದುವರಿದು ಅದಕ್ಕಿಂತ ಮೊದಲು ದೇವಸ್ಥಾನದಲ್ಲಿ ವಿವಾಹವಾಗಿತ್ತು ಎಂದು ನುಡಿದಿರುತ್ತಾರೆ. ಎಷ್ಟು ವರ್ಷ ಮೊದಲು ವಿವಾಹವಾಗಿತ್ತು ಎಂದರೆ ನಾಲ್ಕು ವರ್ಷ ಮೊದಲು. ಅದಕ್ಕೆ ಪ್ರೂಫ್ ಇದೆ ಎಂದರೆ ಇಲ್ಲ. 2004 ರಲ್ಲಿ ನಿಮ್ಮ ಹೆಂಡತಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದರೆ ನೆನಪಿಲ್ಲ. ನಿಮಗೆ ಎಷ್ಟು ಮಕ್ಕಳು ಎಂದರೆ ಮಕ್ಕಳಿಲ್ಲ.

16. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು, ಅದು ತಾನು ಮತ್ತು ತನ್ನ



ಹೆಂಡತಿ ಎಂದು ಪೆರಡೂರಿನಲ್ಲಿ ನೆರವೇರಿದ ವಿವಾಹದ ಪೋಟೋ ಎಂದು ಗುರುತಿಸಿದ್ದು, ಸದರಿ ಪೋಟೋ ವನ್ನು ನಿಪಿ-8 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ ಕಾಣುವ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ನನ್ನ ಸಹೋದರ ಎಂದರೆ ಗೊತ್ತಿಲ್ಲ.

17. ನನ್ನ ತಂದೆಯ ಸಹೋದರನ ಹೆಸರು ಗೋಪಾಲ ಮೇಸ್ತ್ರಿ ಎಂದರೆ ನಿಜ. ನನ್ನ ವಿವಾಹದಲ್ಲಿ ಧಾರಾ ಮುಹೂರ್ತದಲ್ಲಿ ಕುಳಿತಿದ್ದ ವ್ಯಕ್ತಿ ಗೋಪಾಲ ಮೇಸ್ತ್ರಿ ಎಂದರೆ ನಿಜ. ಸಾಕ್ಷಿದಾರರಿಗೆ ಒಂದು ಪೋಟೋ ತೋರಿಸಿ ಅದರಲ್ಲಿ ಕಾಣುವ ವ್ಯಕ್ತಿ ಗೋಪಾಲ ಮೇಸ್ತ್ರಿ ಮತ್ತು ಆತನ ಹೆಂಡತಿ ಎಂದರೆ ಹೌದು ಎಂದು ಒಪ್ಪಿಕೊಂಡಿದ್ದು, ಸದರಿ ಪೋಟೋವನ್ನು ನಿಪಿ-9 ಎಂದು ಗುರುತಿಸಲಾಯಿತು.

18.ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದರಲ್ಲಿ ಕಾಣುವ ವ್ಯಕ್ತಿಯು ಮೂರನೇ ಪ್ರತಿವಾದಿ ಇದ್ದು, 2005 ರಲ್ಲಿ ನೆರವೇರಿದ ಮೂರನೇ ಪ್ರತಿವಾದಿಯ ವಿವಾಹದ ಪೋಟೋ ಎಂದು ತೋರಿಸಿದ್ದು, ಸದರಿ ಪೋಟೋವನ್ನು ಸಾಕ್ಷಿದಾರರು ಒಪ್ಪಿಕೊಂಡಿದ್ದು, ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ನಿಪಿ-10 ರಲ್ಲಿ

ಕಾಣುವ ಇಬ್ಬರು ಮಕ್ಕಳು ನನ್ನ ಸಹೋದರನ ಮಕ್ಕಳು ಎಂದರೆ ಗೊತ್ತಿಲ್ಲ.

19. ಮೈಸೂರಿಗೆ ಹೋದ ವೇಳೆ ತೆಗೆದ ಪೋಟೋ ಎಂದು ಸಾಕ್ಷಿಗೆ ಪೋಟೋ ತೋರಿಸಿದ್ದು, ಅದನ್ನು ಸಾಕ್ಷಿದಾರರು ಒಪ್ಪಿಕೊಂಡಿದ್ದು, ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಕಾಣುವ ವ್ಯಕ್ತಿಗಳು ನಮ್ಮ ಕುಟುಂಬದ ಸದಸ್ಯರು ಎಂದರೆ ನಿಜ. ನಿಪಿ-11 ರ ಪೋಟೋದಲ್ಲಿ 3 ಪ್ರತಿವಾದಿಯ ಗಂಡನ ಪಕ್ಕ ನಿಂತಿರುವ ಪುರುಷ ವ್ಯಕ್ತಿ ಯಾರು ಎಂದರೆ ಗೊತ್ತಿಲ್ಲ. ಈಗ ತೋರಿಸಿದ ಸದರಿ ವ್ಯಕ್ತಿ ಆರ್ಮುಗಮ್ ಎಂದರೆ ಗೊತ್ತಿಲ್ಲ. ಆರ್ಮುಗಮ್ ರವರಿಗೆ ಆನಂದ ಎಂದು ಹೆಸರಿದೆ ಎಂದರೆ ಗೊತ್ತಿಲ್ಲ.

20. ಆರ್ಮುಗಮ್ ರವರನ್ನು ಕೊನೆಯ ಬಾರಿ ನೋಡಿ ಎಷ್ಟು ವರ್ಷಗಳಾಯಿತು ಎಂದರೆ ನೆನಪಿಲ್ಲ. ಆರ್ಮುಗಮ್ ಯಾರು ಎಂದು ನನ್ನ ಸಹೋದರ ಮತ್ತು ಸಹೋದರಿಯರಿಗೆ ಗೊತ್ತಿದೆ ಎಂದರೆ ನನಗೆ ಗೊತ್ತಿಲ್ಲ.

21. 1 ನೇ ಪ್ರತಿವಾದಿ ನನ್ನ ಸಹೋದರ ಎಂದರೆ ನಿಜ. ಸಾಕ್ಷಿಗೆ ಈಗ ಪೋಟೋ ತೋರಿಸಿ ಅದರ ಎಡಬದಿಯಲ್ಲಿ ಇರುವ ವ್ಯಕ್ತಿ 1 ನೇ ಪ್ರತಿವಾದಿ ಎಂದರೆ ಹೌದು ಎಂದು ಒಪ್ಪಿಕೊಂಡಿದ್ದು, ಅದರಿ ಪೋಟೋ ವನ್ನು ನಿಪಿ-12



ಎಂದು ಗುರುತಿಸಲಾಯಿತು.

22. ಸಾಕ್ಷಿಗೆ ಪೋಟೋ ತೋರಿಸಲಾಗಿ, ಪೋಟೋದಲ್ಲಿನ ಎಡಭಾಗದಲ್ಲಿನ ವ್ಯಕ್ತಿ ಒಂದನೇ ಪ್ರತಿವಾದಿ ಎಂದು ಮತ್ತು ಬಲಭಾದಲ್ಲಿನ ವ್ಯಕ್ತಿ ಎರಡನೇ ಪ್ರತಿವಾದಿ ಎಂದು ಗುರುತಿಸಿದ್ದು, ಸದರಿ ಪೋಟೋವನ್ನು ನಿಪಿ-13 ಎಂದು ಗುರುತಿಸಲಾಯಿತು.

23. ನ್ಯಾಯಾಲಯದಿಂದ 1 ನೇ ಪ್ರತಿವಾದಿಗೆ ಸಮನ್ಸ ಜಾರಿಯಾಗಿದೆ ಎಂದರೆ ನಿಜ. ಸಾಕ್ಷಿದಾರರಿಗೆ ಒಂದು ಮತ್ತು 5 ನೇ ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ತೋರಿಸಲಾಗಿ ಪ್ರತಿವಾದ ಪತ್ರದ ಮೊದಲನೇ ಪ್ರತಿವಾದಿ ಎಂಬಲ್ಲಿನ ಸಹಿಯನ್ನು 1 ನೇ ಪ್ರತಿವಾದಿಯ ಸಹಿ ಎಂದು ಗುರುತಿಸಿರುತ್ತಾರೆ. ಪ್ರತಿವಾದ ಪತ್ರದ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ಮೊದಲನೇ ಸಹಿ 1 ನೇ ಪ್ರತಿವಾದಿಯ ಸಹಿ ಎಂದರೆ ನಿಜ.

24. ದಾವಾ ಎ ಅನುಸೂಚಿಯ ಅನುಕ್ರಮ ನಂಬರ್ 1 ರ ಆಸ್ತಿ ಯಾರಿಗೆ ಸೇರಿದೆ ಎಂದರೆ ನನ್ನ ತಂದೆಯ ಆಸ್ತಿ. ಸದರಿ ಆಸ್ತಿಯನ್ನು ನನ್ನ ತಂದೆಯವರು ಖರೀದಿಸಿದ ಆಸ್ತಿ ಎಂದರೆ ನಿಜ. ದಾವಾ ಎ ಅನುಸೂಚಿಯ ಅನುಕ್ರಮ ನಂಬರ್2 ರ ಆಸ್ತಿ ಯಾರಿಗೆ ಸೇರಿದೆ ಎಂದರೆ ನನ್ನ ತಾಯಿಯ ಆಸ್ತಿ. ಸದರಿ ಆಸ್ತಿಯು ನನ್ನ ತಾಯಿಗೆ

ಮಂಜೂರಾದ ಆಸ್ತಿ ಎಂದರೆ ನಿಜ.

25. ನನ್ನ ತಂದೆ ಮೂಲತಃ ತಮಿಳುನಾಡಿನವರು ಎಂದರೆ ನಿಜ. ನಿಮ್ಮ ತಾಯಿ ಎಲ್ಲಿಯವರು ಎಂದರೆ ಬೆಂಗಳೂರಿನವರು.

26. ನಿಮ್ಮ ತಂದೆಯವರು ಅವರಿಗೆ 15-16 ವರ್ಷ ವಯಸ್ಸಿದ್ದಾಗ ಕರ್ನಾಟಕಕ್ಕೆ ಬಂದರೆ ಎಂದರೆ ಹೌದು. ನನ್ನ ತಂದೆಯವರಿಗೆ ವಿದ್ಯಾಭ್ಯಾಸ ಇಲ್ಲ ಎಂದರೆ ನಿಜ, ಆದರೆ ಅವರು ತಮಿಳಿನಲ್ಲಿ ಸಹಿ ಮಾಡುತ್ತಿದ್ದರು. ನನ್ನ ತಂದೆಯವರಿಗೆ ಅಕ್ಷರ ಅಭ್ಯಾಸ ಇಲ್ಲ ಎಂದರೆ ತಮಿಳಿನಲ್ಲಿ ಸ್ವಲ್ಪ ಓದುತ್ತಿದ್ದರು, ಆದರೆ ಕನ್ನಡ ಓದಲು ಬರುತ್ತಿರಲಿಲ್ಲ.

27. ದಾವಾ ಎ ಅನುಸೂಚಿಯ ಅನುಕ್ರಮ ನಂಬರ್ 1 ರ ಆಸ್ತಿಯನ್ನು ಕೊಂಡುಕೊಳ್ಳುವ ವೇಳೆ ಬೆಳ್ತಂಗಡಿ ತಾಲೂಕಿನ ಪಡಂಗಡಿ ಗ್ರಾಮದ ಕನ್ನಡಿಕಟ್ಟೆ ಎಂಬಲ್ಲಿ ನನ್ನ ತಂದೆಯವರು ವಾಸವಿದ್ದರು ಎಂದರೆ ನಿಜ. ಸದರಿ ಆಸ್ತಿಯನ್ನು ಕೊಂಡು ಕೊಂಡ ಒಂದು ವರ್ಷದಲ್ಲಿ ನನ್ನ ತಂದೆಯವರು ಮನೆ ಕಟ್ಟಿದರು



ಎಂದರೆ ಸುಳ್ಳು, ಆದರೆ ಮೂರು ವರ್ಷಗಳಲ್ಲಿ ಮನೆ ಕಟ್ಟಿದ್ದರು. ಆ ವೇಳೆ 1 ನೇ ಪ್ರತಿವಾದಿ ಪ್ರಾಯಕ್ಕೆ ಬಂದ ವ್ಯಕ್ತಿ ಎಂದರೆ ನಿಜ. ನಿಡಿ-5 ಕ್ಕೆ ಒಂದನೇ ಪ್ರತಿವಾದಿಯು ಸಾಕ್ಷಿದಾರರ ಎಂದರೆ ನನಗೆ ಗೊತ್ತಿಲ್ಲ.

28. ನಿಮ್ಮ ತಂದೆಯ ತಂದೆಯ ಹೆಸರೇನು ಎಂದರೆ ರಂಗಸ್ವಾಮಿ. ನಿಡಿ-5 ಆಗುವ ವೇಳೆಗೆ ರಂಗಸ್ವಾಮಿಯವರು ನನ್ನ ತಂದೆಯ ಜೊತೆ ವಾಸವಿದ್ದರು ಎಂದರೆ ಇಲ್ಲ, ಆದರೆ ತಮಿಳುನಾಡಿನಲ್ಲಿ ವಾಸವಿದ್ದು, ಬಂದು ಹೋಗುತ್ತಿದ್ದರು. ರಂಗಸ್ವಾಮಿರವರು ಬೆಳ್ತಂಗಡಿಯಲ್ಲಿ ಮರಣ ಹೊಂದಿದರು ಎಂದರೆ ದಾವಾ ಆಸ್ತಿಯಲ್ಲಿ ಮರಣ ಹೊಂದಿದರು. ಮನೆಯ ಪಕ್ಕ ಇರುವ ಎರಡು ಸಮಾದಿಗಳಲ್ಲಿ ಒಂದು ರಂಗಸ್ವಾಮಿಯವರ ಸಮಾಧಿ ಎಂದರೆ ನಿಜ. ಮತ್ತೊಂದು ಸಮಾಧಿ ನನ್ನ ತಾಯಿ ರಂಗಮ್ಮರವರ ಸಮಾಧಿ ಎಂದರೆ ನಿಜ.

29. ವ್ಯಕ್ತಿ ಮರಣ ಹೊಂದಿದಾಗ ತಮಿಳು ಪದ್ದತಿಯಂತೆ ಸಮಾಧಿ ಮಾಡಬೇಕು ಎಂದರೆ ಸಮಾಧಿಯನ್ನು ಮಾಡುತ್ತೇವೆ ಮತ್ತು ದಹನ ಮಾಡುತ್ತೇವೆ. ನಮ್ಮಲ್ಲಿ ಸಮಾಧಿ ಮಾಡುವ ಪದ್ದತಿ ಇದ್ದ ಕಾರಣ ನನ್ನ ತಾತಾ ಮತ್ತು ತಾಯಿಯನ್ನು ಸಮಾಧಿ ಮಾಡಿದ್ದೇವೆ ಎಂದು ನಮ್ಮಲ್ಲಿ ಜಾಗ ಇದ್ದ ಕಾರಣ ಸಮಾಧಿ ಮಾಡಿದ್ದೇವೆ. ದಾವಾ ಆಸ್ತಿಯಲ್ಲಿ ಈಗಲೂ ಜಾಗ ಇದೆ ಎಂದರೆ ನಿಜ.

30. ನಿಮ್ಮ ತಂದೆಯ ಸಮಾಧಿ ಎಲ್ಲಿದೆ ಎಂದರೆ ಅವರು ನನ್ನ ಮನೆಯಲ್ಲಿ

ಮರಣ ಹೊಂದಿದ್ದು, ದಹನ ಮಾಡಿದ್ದೇವೆ. ಯಾವ ಸ್ಮಶಾನದಲ್ಲಿ ದಹನ ಮಾಡಲಾಯಿತು ಎಂದರೆ ಮನೆಯ ಬಳಿ ದಹನ ಮಾಡಲಾಯಿತು. ನನ್ನ ತಂದೆಯವರು ಮರಣ ಹೊಂದಿದ ಬಗ್ಗೆ ವೈಧ್ಯರ ಪ್ರಮಾಣ ಪತ್ರ ಇದೆ ಎಂದರೆ ಇಲ್ಲ ಅವರು ಮನೆಯಲ್ಲಿ ಮರಣ ಹೊಂದಿದರು.

31. ನಿಮ್ಮ ತಂದೆಯ ಮರಣ ಪ್ರಮಾಣ ಪತ್ರ ಕೋರಿ ಅರ್ಜಿ ಕೊಟ್ಟವರು ಯಾರು ಎಂದರೆ ನಾನೇ. ಯಾವ ದಾಖಲೆಗಳನ್ನು ಸಂಬಂದಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದೀರಿ ಎಂದರೆ ಗ್ರಾಮ ಲೆಕ್ಕಾಧಿಕಾರಿಯವರು ಮನೆಗೆ ಬಂದು ನನ್ನ ತಂದೆ ಮರಣ ಹೊಂದಿರುವುದನ್ನು ನೋಡಿರುತ್ತಾರೆ. ಯಾವ ದಿನಾಂಕದಂದು ಬಂದು ನೋಡಿದರು ಎಂದರೆ ದಿನಾಂಕ 13.11.2010. ನೀವು ಯಾವಾಗ ಅರ್ಜಿ ಕೊಟ್ಟಿರಿ ಎಂದರೆ ನೆನಪಿಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ ಎಂದರೆ ನಿಜ ನಿಡಿ-4 ಮರಣ ಪ್ರಮಾಣ ಪತ್ರದ ಮೂಲ



ಪ್ರತಿಯೇ ಎಂದರೆ ಹೌದು. ನಿಡಿ-4 ರಲ್ಲಿನ ರಂಗಸ್ವಾಮಿ ಎಂಬ ಹೆಸರನ್ನು ತಿದ್ದಿ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

32. ನೀವು ಏನು ವಿದ್ಯಾಭ್ಯಾಸ ಮಾಡಿದ್ದಿರಿ ಎಂದರೆ ಎಸ್.ಎಸ್.ಎಲ್.ಸಿ. ಏನು ಉದ್ಯೋಗ ಮಾಡುತ್ತೀರಿ ಎಂದರೆ PWD ಗುತ್ತಿಗೆದಾರ.

33. ಪೆರಮಾಳು ಸ್ವಾಮಿಯವರ ಮರಣ ಪ್ರಮಾಣ ಪತ್ರದಲ್ಲಿ ತಿದ್ದಲಾಗಿದೆ ಎಂದು ತಹಸೀಲ್ದಾರ್ ಬೆಳ್ತಂಗಡಿಯವರು ಹಿಂಬರಹ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

34. ದಾವಾ ಎ ಅನುಸೂಚಿಯ ಅನುಕ್ರಮ ನಂಬರ್2 ರ ಆಸ್ತಿಗೆ ಸಂಬಂದಿಸಿದ ಸಾಗುವಳಿ ಚೀಟಿಯನ್ನು ನಾನು ಪಡೆದಿದ್ದೇನೆ ಎಂದರೆ ಇರಬಹುದು ನೆನಪಿಲ್ಲ.

35. ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ಯಾವ ಇಸವಿಯಲ್ಲಿ ನಿಮ್ಮ ಹೆಸರಿನಲ್ಲಿ ವರ್ಗಾಯಿಸಿಕೊಂಡಿರಿ ಎಂದರೆ 2012. ಆ ವೇಳೆ ನಿಮ್ಮ ಸಹೋದರ ಮತ್ತು ಸಹೋದರಿಯರಿಗೆ ನೋಟಿಸ್ ಕೊಟ್ಟಿದ್ದೀರಾ ಎಂದರೆ ಸೂಚನ ಫಲಕದಲ್ಲಿ ಪ್ರಕಟಿಸಲಾಗಿದೆ. ಸದರಿಯವರ ವಿಳಾಸಗಳನ್ನು ಕೊಟ್ಟಿದ್ದೀರಾ ಎಂದರೆ ವಿಳಾಸಗಳು ಗೊತ್ತಿಲ್ಲ.

36. ದಾವಾ ಎ ಅನುಸೂಚಿ ಅನುಕ್ರಮ ನಂಬರ್ 1 ರ ಆಸ್ತಿಯು ಸಂಬಂಧಿಸಿದಂತೆ ಖಾತೆ ಬದಲಾವಣೆ ಕೋರಿ ಸಲ್ಲಿಸಿದ ಅರ್ಜಿಯು ತಿರಸ್ಕಾರವಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ವಿಷಯದ ಅರ್ಜಿದಾರ ಮತ್ತು ಆಕ್ಷೇಪಣೆದಾರ ನಾನೇ

ಎಂದರೆ ಅರ್ಜಿ ಕೊಟ್ಟಿದ್ದೇನೆ, ಆದರೆ ನೆನಪಿಲ್ಲ.

37.ದಾವಾ ಎ ಅನುಸೂಚಿ ಅನುಕ್ರಮ ನಂಬರ್ 1 ರ ಆಸ್ತಿಗೆ ಸಂಬಂದಪಟ್ಟ ಕ್ರಯ ಪತ್ರ ನನ್ನ ವಶದಲ್ಲಿತ್ತು ಎಂದರೆ ನಿಜ. ನಿಡಿ-5 ರಲ್ಲಿ ನನ್ನ ತಂದೆಯವರ ಸಹಿ ಇದೆ ಎಂದರೆ ನಿಜ. ನಿಡಿ-5 ರಲ್ಲಿನ ನನ್ನ ತಂದೆಯ ಸಹಿಯ ಮಾದರಿಯನ್ನು ದುರುಪಯೋಗಪಡಿಸಿಕೊಂಡಿದ್ದೇನೆಂದರೆ ಸುಳ್ಳು.

38. ಆರ್ಮುಗಮ್ ರವರು ಕಾರ್ಕಳದಲ್ಲಿ ಇದ್ದಾರೆ ಎಂದು ಯಾರು ಹೇಳಿದರು ಎಂದರೆ ಗೊತ್ತಿಲ್ಲ.

39. ಅಂಬೇಶ್ವರಿ (6 ನೇ ಪ್ರತಿವಾದಿಯ ತಾಯಿ) ಯಾರು ಎಂದರೆ ನನ್ನ ಅಕ್ಕ. ಲಕ್ಷ್ಮಿ ಎನ್ನುವವರು ಅಂಬೇಶ್ವರಿಯವರ ಮಗಳು ಎಂದರೆ ನನಗೆ ಗೊತ್ತಿಲ್ಲ. ಅಂಬೇಶ್ವರಿರವರಿಗೆ ಎಷ್ಟು ಜನ ಮಕ್ಕಳು ಎಂದರೆ ನಾಲ್ಕು ಜನ. ಅವರು ಯಾರು



ಎಂದರೆ ಪದ್ಮಾವತಿ, ಶ್ರೀನಿವಾಸ, ಮಂಜುನಾಥ ಮತ್ತು ವಿಜಯ.

40. ನ್ಯಾಯಾಲಯದ ಮುಂದೆ ಹಾಜರಿರುವ ಮೂರನೇ ವಾದಿಯನ್ನು ಮಂಜುನಾಥ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ಪದ್ಮಾವತಿಯ ಗಂಡನ ಹೆಸರೇನು ಎಂದರೆ ಆರ್ಮುಗಮ್. ನಾನು ಈ ಮೇಲೆ ಹೇಳಿದ ಆರ್ಮುಗಮ್ ರವರು ಪದ್ಮಾವತಿಯ ಗಂಡ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರ್ಮುಗಮ್ ರವರು ಪದ್ಮಾವತಿಯ ಗಂಡ ಎಂದರೆ ನನಗೆ ಗೊತ್ತಿಲ್ಲ.

41. ವಾದಿಯರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದುವರಿದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

Sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ